JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# "ಕುಮಾರವ್ಯಾಸ ಭಾರತದಲ್ಲಿ ಕಂಡುಬರುವ ಭಕ್ತಿಯ ಸ್ವರೂಪ"

**ಪತ್ರಿಕೆ ಸಿದ್ಧಪಡಿಸಿದವರು**

ಮುನಿರಾಜು ಕೆ ಸಹಾಯಕ ಪ್ರಾಧ್ಯಾಪಕರು

ಕನ್ನಡ ವಿಭಾಗ

ಸರ್ಕಾರಿ ಪ್ರಥಮ ದರ್ಜೆ ಕಲಾ,ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು –ಸಿರಾ-572137

ಕುಮಾರವ್ಯಾಸ ಕನ್ನಡ ಸಾಹಿತ್ಯದ ಯುಗ ಪ್ರವರ್ತಕ ಕವಿಯಾಗಿದ್ದು, ಈತನ ಕಾಲದ ಬಗ್ಗೆ ವಿದ್ವಾಂಶರಲ್ಲಿ ಬಿನ್ನಾಭಿಪ್ರಾಯಗಳು ಇವೆ. 13 ನೇ ಶತಮಾನದಿಂದ 15 ನೇ ಶತಮಾನದವರೆಗೆ ವಿಸ್ತರಿಸಿಕೊಂಡಿದೆ. ವ್ಯಾಸರ ಮಹಾಭಾರತ ಕೃತಿಯನ್ನೂ ಮೂಲ ಆಕರವನ್ನಾಗಿ ಸ್ವೀಕರಿಸಿದರೂ ಸ್ವತಂತ್ರವಾದ ರೂಪಕಗಳಲ್ಲಿ ಈ ಕೃತಿಯನ್ನು ರಚಿಸಿದ್ದಾನೆ. ವೀರ ನಾರಯಣ ಕವಿ ,ಲಿಪಿಕಾರ ನಾನು ಎಂದು ತನ್ನ ಸ್ವಂತ ವಿಚಾರಗಳನ್ನು ಎಲ್ಲಿಯೂ ಹೇಳಿಕೊಂಡಿಲ್ಲ. ಆದರೆ ಕೆಲವು ಮಾಹಿತಿಗಳ ಪ್ರಕಾರ ಈತ ಗದುಗಿನ ಕೋಳಿವಾಡದವ, ನಾರಣಪ್ಪ ಎಂದು ಕರೆಯಲಾಗಿದೆ. ಈತನ ಕೃತಿ "ಕರ್ನಾಟಕ ಭಾರತ ಕಥಾಮಂಜರಿ" ಎಂದು ಕರೆದರೂ ಜನರ ಮನದಲ್ಲಿ 'ಗದುಗಿನ ಭಾರತ' ಎಂದು ಸ್ಥಿರವಾಗಿ ನೆಲೆಸಿದೆ. ಭಾಗವತ ದೃಷ್ಟಿಯಿಂದ ಈ ಕೃತಿ ರಚಿಸಿದ್ದು ಮಹಾಭಾರತದ ಹತ್ತು ಪರ್ವಗಳನ್ನು 'ಭಾಮಿನಿ ಷಟ್ಪದಿ'ಯಲ್ಲಿ ರಚಿಸಿದ್ದಾನೆ. ಇದು ವ್ಯಾಸಭಾರತದ ಅನುವಾದವಲ್ಲ. ಸ್ವತಂತ್ರ ಕಳೆಯುಳ್ಳ ಪ್ರತಿಯಾಗಿದ್ದು, ಕವಿ ಪ್ರತಿಭೆಯ ಮತ್ತು ಭಕ್ತಿ ದರ್ಶನದ ಪರಮ ಸೀಮೆಯಲ್ಲಿದೆ. ಇಲ್ಲಿ ಕನ್ನಡ ದೇಶಿಯ ಸಹಜತನ ಕಂಡುಬರುತ್ತದೆ.

ಕುಮಾರವ್ಯಾಸ ಭಾರತವು ಭಾಗವತ ಧರ್ಮದ ಪ್ರತೀಕವಾಗಿದ್ದು ಕೃಷ್ಣನೇ ಪ್ರಮುಖವಾಗಿ ಕೇಂದ್ರಸ್ಥಾನದಲ್ಲಿ ಚಿತ್ರಿಸಿ ಅವನ ಸುತ್ತ ಕಥಾ ಪಾತ್ರಗಳನ್ನು ಸೃಷ್ಟಿಸಲಾಗಿದೆ. ಕೃತಿಯ ಪ್ರಾರಂಭದಲ್ಲಿ

" ಶ್ರೀವನಿತೆಯರಸನೆ ವಿಮಲರಾ

ಜೀವ ಪೀಠನ ಪಿತನೆ ಜಗಪತಿ

ಪಾವನನೆ ಸನಕಾದಿ ಸಜ್ಜನನಿಕರದಾತಾರ

ರಾವಣಾಸುರಮಥನ ಶ್ರವಣಸು

ಧಾವಿನೂತನ ಕಥನ ಕಾರಣ

ಕಾವುದಾತನತಜನವ ಗದುಗಿನ ವೀರನಾರಾಯಣ "

ಎಂಬ ಪದ್ಯದ ಮುಖಾಂತರ ಆದಿಪರ್ವ ಪ್ರಾರಂಭವಾಗುತ್ತದೆ. ಇಲ್ಲಿ ಕವಿ ಶ್ರೀವಿಷ್ಣುವನ್ನು ಸ್ತುತಿಸುತ್ತ ಲಕ್ಷ್ಮೀಯ ಒಡೆಯನಾದ ದೇವರೇ ನಿರ್ಮಲವಾದ ತಾವರೆಯ ಪೀಠದಲ್ಲಿ ನೆಲೆಸಿರುವ ಬ್ರಹ್ಮದೇವನಿಗೆ ತಂದೆಯಾಗಿರುವ ಲೋಕದಲ್ಲಿ ಪರಮ ಶ್ರೇಷ್ಠನಾಗಿರುವವನೇ, ವೈರಿ ಸಮೂಹವನ್ನು ನಾಶಮಾಡಿ ಭಕ್ತಗಣವನ್ನು ನಿನ್ನಡಿಗೆ ಎರಗಿದ ಜನರನ್ನು ರಕ್ಷಿಸು, ಕರುಣೆಯಿಂದ ಕಾಪಾಡು ತಂದೆ ಎಂದು ಭಕ್ತಿಯಿಂದ ಚಿತ್ರಿಸುತ್ತಾನೆ.

ಕವಿ ಭಾರತ ನಾಟಕಕ್ಕೆ ಕೃಷ್ಣನೇ ಸೂತ್ರದಾರ ಕೃಷ್ಣಕಥೆ ಎಂದು ಎಂದು ಇದರಿಂದ ತಿಳಿಯುತ್ತದೆ ಕೃಷ್ಣನೇ ಈ ಕಾವ್ಯದ ನಾಯಕನಾಗಿದ್ದಾನೆ. ಇಲ್ಲಿ ಕೃಷ್ಣನೇ ಭಾರತಕ್ಕೆ ಪ್ರೇರಕ ಚಾಲಕ ಶಕ್ತಿಯಾಗಿರುವುದರಿಂದ ಈ ಕೃತಿಯ ನಾಯಕನಾಗಿ ಕವಿ ಚಿತ್ರಿಸಿದ್ದಾನೆ. ಕೃಷ್ಣನನ್ನು ಸಹಜ ಗುಣಗಳಿಗೆ ಅನುಗುಣವಾಗಿ ಚಿತ್ರಿಸಲಾಗಿದೆ. ಆದರೂ ದಿವ್ಯಮಾನುಷ ವ್ಯಕ್ತಿಯಾಗಿ, ಮನುಷ್ಯ ರೂಪದ ದೈವವಾಗಿ ಕಥೆಯನ್ನು ಎಣೆಯಲಾಗಿದೆ. ಅಂದರೆ ಅರಸುಗಳಿಗೆ ವೀರ, ದ್ವಿಜರಿಗೆ ಪರಮ ವೇದದ ಸಾರ. ಯೋಗಿಶ್ವರರಿಗೆ ತತ್ವ ವಿಚಾರ,ಮಂತ್ರಿಜನಗಳಿಗೆ ಬುದ್ಧಿಗುಣವನ್ನು ಕಂಡುಕೊಳ್ಳುವ ಸ್ಥಾನ, ಇದು ವಿರಹಿಗಳಿಗೆ ಶೃಂಗಾರ, ವಿದ್ಯಾಪರಿಣತರಿಗೆ ಅಲಂಕಾರ. ಹೀಗೆ ಕಾವ್ಯಕೆಲ್ಲ ಗುರು ಎನಿಸಿಕೊಳ್ಳುವಂತೆ ಈ ಭಾರತವನ್ನು ಕುಮಾರವ್ಯಾಸವನ್ನು ರಚಿಸಿದ್ದಾನೆ. ಭಕ್ತಿಯ ಮಹತ್ವವನ್ನು  ವಿವರಿಸುತ್ತಾ ಜೀವನದ ಎಲ್ಲ ತೊಡಕುಗಳಿಗೂ ದೇವರನ್ನು ನಂಬಿ ನಡೆಯುವುದೊಂದೇ ಗತಿ ಎಂದು ನಂಬಿದ್ದಾನೆ, ಈತನಿಗೆ ಭಕ್ತಪಥದಲ್ಲಿ ಅಚಲವಾದ ನಿಷ್ಠೆಯಿಂದ ವಿಷಯ ಸುವಿದಿತವಾಗಿದೆ.ಅಂದರೆ ಕುಮಾರವ್ಯಾಸನಿಗೂ ಉಳಿದ ಭಕ್ತಕವಿಗಳಿಗೂ ಅಂತರವನ್ನು ಕಾಣಬಹುದು.

ಕುಮಾರವ್ಯಾಸನಲ್ಲಿ ಜಗತ್ತು ದೇವರ ಲೀಲೆ ಎಂಬ ಸಿದ್ಧಾಂತದಲ್ಲಿ ಧೃಡವಾದ ನಂಬಿಕೆ ಇಟ್ಟಿರುವನು. " ಇದು ಮುರಾರಿಯ ಲೀಲೆಗೋಸುಗ ಉದಯಿಸಿದ ಜಗ ಕೌರವವಾರಧಿಯ ಮುಕ್ಕಳಿಸಲೆಂದೇ ಶೌರಿಯೈತರುತಿರ್ದನಂದು ನೃಪಾಲನೋಲಗಕ್ಕೆ, ಎಂಬ ಹೇಳಿಕೆಗಳು ಕೃಷ್ಣನ ಲೀಲೆಗಳನ್ನು ಜಗತ್ತಿಗೆ ಸಾರುತ್ತವೆ. ಈ ಕೃತಿಯಲ್ಲಿ ಭಕ್ತಿ ರಸದ ಜೊತೆಗೆ ವೀರ- ರೌದ್ರ, ಅಧ್ಬುತ ರಸಗಳ ಸನ್ನಿವೇಶ ಒಡಮೂಡಿದೆ.

ಶ್ರೀ ಕೃಷ್ಣ ತನ್ನ ಭಕ್ತರನ್ನು ಹೇಗೆ ರಕ್ಷಣೆ ಮಾಡುತ್ತಾನೆ ಎಂದರೆ ದ್ರೌಪದಿಗೆ ಕೃಷನ ಕೃಪೆಯಿಂದ ಅಕ್ಷಯ ಪಾತ್ರೆ ದೊರೆತಂತೆ. ಕುಮಾರವ್ಯಾಸ ಭಾರತದಲ್ಲಿ ಧುರ್ಯೋಧನ ಕೃಷ್ಣನನ್ನು ಬಂಧಿಸುವ ಸಂಧರ್ಭದಲ್ಲಿ, ದ್ರೌಪದಿಯ ರಕ್ಷಣೆಯ ಸಂದರ್ಭದಲ್ಲಿ ವಿಧುರ ಮತ್ತು ಕೃಷ್ಣನ ಒಡನಾಟ ಸಂದರ್ಭದಲ್ಲಿ ಕೃಷ್ಣನ ಮಹತ್ವವನ್ನು ನಾವು ಗುರುತಿಸಬಹುದು.

ಯತ್ರ ನಾರಾಯಣಃ ಕೃಷ್ಣೋ

ಯತ್ರ ಪಾರ್ಥೋಧನುರ್ಧರಃ

ತತ್ರ ಶ್ರೀರ್ವಿಜಯೋಭೂತಿಃ

ಧ್ರುವಾ ನೀತಿರ್ಮತಿರ್ಮಯ

ಅಂದರೆ ಎಲ್ಲಿ ನಾರಾಯಣ ಸ್ವರೂಪನಾದ ಕೃಷ್ಣನಿರುವನೋ ಎಲ್ಲಿ ಪಾರ್ಥನು ಧನುರ್ದಾರಿಯಾಗಿರುವನೋ ಅಲ್ಲಿ ಸಂತೃಪ್ತ ವಿಜಯ ಸಮೃದ್ಧಿ ಶಾಶ್ವತವಾದ ನೀತಿ ನೆಲಸಿರುತ್ತಾನೆ ಎನ್ನಲಾಗಿದೆ ಅಂದರೆ ಮಹಾಮಹಿಮನಾದ ಲೋಕಪೂಜ್ಯನಾದ ಆದರ್ಶನಲ್ಲೆ ಸರ್ವೋತ್ತಮನಾದವನು ಶ್ರೀಕೃಷ್ಣ ಈ ಕೃತಿಯ ನಾಯಕ ಶ್ರೀಕೃಷ್ಣನೇ ಕಥಾನಾಯಕ ಅವನು ಭಗವಂತ. ನಾರಾಯಣ ಅವತಾರ ಸರ್ವಪ್ರೇರಕ ಭಗವತ್ ಪ್ರೇರಣೆಯನ್ನು ಅರಿತುಕೊಂಡು

ಭಗವಂತನ ಇಚ್ಛೆಗೆ ಸಂಪೂರ್ಣವಾಗಿ ಸಮರ್ಪಿಸಿಕೊಳ್ಳಬೇಕು ಎಂದು ಕುಮಾರವ್ಯಾಸ ಚಿತ್ರಿಸಿದ್ದಾನೆ. ಅಂದರೆ ಕುಮಾರವ್ಯಾಸನ ಭಕ್ತಿ ದೈನ್ಯಭಕ್ತಿಯಲ್ಲ ಕೆಚ್ಚೆದೆಯ ಭಕ್ತಿ.

ಶಾಂತ ನಾಗಮಂಗಲ ರವರ "ಕುಮಾರವ್ಯಾಸ ಭಕ್ತಿರಸದ ಚಿತ್ರಣ" ಎಂಬ ಲೇಖನದಲ್ಲಿ ಉಲ್ಲೇಖವಾಗಿರುವಂತೆ " ಭಕ್ತಿ ಎಂಬುದು ಭಗವಂತನನ್ನು ಪ್ರೀತಿಯಿಂದ ಉಪಾಸನೆ ಮಾಡುವ ಒಂದು ಚಿತ್ತವೃತ್ತಿ ಎನ್ನಲಾಗುತ್ತದೆ. ಭಕ್ತಿಯ ಮೂಲಕ ಭಗವಂತನ ಅನುಗ್ರಹಕ್ಕೆ ಪಾತ್ರವಾಗುವುದು. ಭಾವ ಪ್ರೇಮ, ಪ್ರಣಯ ಸ್ನೇಹ ,ರಾಗ ಅನುರಾಗ ಮತ್ತು ವ್ಯಸನ ಏಳು ಹಂತಗಳಲ್ಲಿ ಕೃಷ್ಣ ಭಕ್ತಿಯನ್ನು ಸಾಧಿಸುವುದು ಎಂದಿದ್ದಾರೆ.

ಕೃಷ್ಣ ಎಂದರೆ ಭಗವಂತ ಭಗವಂತ ಎಂದರೆ ಭಗವುಳ್ಳವನು ಎಂದರ್ಥ. ಜೀವಿಗಳ ಉತ್ಪತ್ತಿ ಮತ್ತು ವಿನಾಶ ಗತಿ ಮತ್ತು ಅಗತಿ ವಿಧ್ಯಾ ಮತ್ತು ಅವಿದ್ಯಾ ಈ ಆರನ್ನು ಭಗ ಎಂದುಕರೆಯುತ್ತಾರೆ. ಈ ಭಗವನ್ನು ಸಂಪೂರ್ಣವಾಗಿ ತಿಳಿದವನು ಭಗವಂತ.

ಭಕ್ತಿಯಲ್ಲಿ ಶಾಂತ, ದಾಸ್ಯ, ಸಖ್ಯ, ಮಧುರ ವಾತ್ಸಲ್ಯ ಐದು ಪ್ರಭೇಧಗಳನ್ನು ಗುರುತಿಸಲಾಗಿದೆ. ಭಕ್ತಿಯ ಸೆಲೆಯಲ್ಲಿ ಗಮನಿಸಿದಾಗ ಅಂತಹ ಪಾತ್ರಗಳನ್ನುಬೀಷ್ಮ,ವಿಧುರ ದ್ರೌಪದಿ ಕಾಣುತ್ತೆವೆ ವಿಧುರನ ಕೃಷ್ಣಭಕ್ತಿಯನ್ನು ಕವಿ ಚಿತ್ರಿಸುವ ಬಗ್ಗೆ ಅನನ್ಯವಾಗಿದೆ.

ಕೃಷ್ಣ ಇಲ್ಲಿ ಪಾಂಡವರ ದೂತನಾಗಿ ಕೌರವ ಪಾಂದವರಿಬ್ಬರಿಗೂ ಲೋಕಕ್ಕೆ ಹಿತವಾಗುವ ರೀತಿಯಲ್ಲಿ ಸಂಧಾನಕ್ಕೆ ಪ್ರಯತ್ನಿಸುವ ಅಂಶ ಕಾಣಬಹುದು.

"ಸಿರಿಮೊಗದ ಕಿರುಬೆವನದ ತೇಜಿಯ

ಖುರಪುಟದ ಕೆಂದೂಳಿ ಸೋಂಕಿದ

ಸಿರಿಮುಡಿಯ ಕುಡಿಮೀಸೆಯಲಿ

ಕೆಂಪಡರ್ದ ರೇಣುಗಳ ಖರಮದೀಚಿಯ

ಜಳಕ ಬಾಡಿದ ತರುಣ ತುಲಸಿಯ

ದಂಡೆಯೊಪ್ಪುವ ಗರುವದೇವನ ಬರವ

ಕಂಡನು ಬಾಗಿಲಲಿ ವಿದುರ"

ಭಕ್ತಿಯ ಸ್ವರೂಪವನ್ನು ಕವಿ ಚಿತ್ರಿಸಿದ್ದಾನೆ ವಿಧುರ ಕೃಷ್ಣ ತನ್ನ ಮನೆಯ ಬಾಗಿಲಿಗೆ ಬಂದಾಗ ಅದನ್ನು ಕಂಡು ಪರಮಸುಖದಲ್ಲಿ ತನುವ ಮರೆದನು ನಯನ ಜಲವೊಗಲು ಎನ್ನುತ್ತಾನೆ ಕವಿ.

## ಪರಾಮರ್ಶನ ಗ್ರಂಥಗಳು:

1 ಕುಮಾರವ್ಯಾಸ ಮಹಾಕವಿಯ ಕರ್ಣಾಟಕ ಭಾರತ ಕಥಾಮಂಜರಿ- ಎಲ್ ಗುಂಡಪ್ಪ

2. ಕುಮಾರವ್ಯಾಸನ-ಕನ್ನಡಭಾರತ- ಸಂ. ಶ್ಯಾಮಸುಂದರ ಬಿದರಕುಂದಿ

3.ಪ್ರಾಚೀನ ಕನ್ನಡ ಸಾಹಿತ್ಯ ರೂಪಗಳು- ಡಾ. ರಂ. ಶ್ರೀ. ಮುಗಳಿ

4.ಪ್ರಾಚೀನ ಕಾವ್ಯ ಚಿಂತನ- ರಾ.ಗೌ.

5. ಕನ್ನಡ ಸಾಹಿತ್ಯ ಚರಿತ್ರೆ- ಡಾ. ರಂ. ಶ್ರೀ. ಮುಗಳಿ